ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ, ಹಿಟ್ಟಿಗೆ ಸೇರುವಷ್ಟು ಕಬ್ಬಿನ ಹಾಲು ಸೇರಿಸಿ ಹಿಟ್ಟು ಹದ ಮಾಡಿ, ನುಣುಪಾಗಿ ಹೊಳೆವ ದೊಡ್ಡ ಗಡಿಗೆ, ಕೋಲು, ಬಟ್ಟೆ ಎಲ್ಲ ಹುಡುಕಿ ಇಟ್ಟುಕೊಂಡಳು ಕಲಾವತಿ.

ದಿನಕ್ಕೆ ಒಂದು ಎರಡರಂತೆ ಮಂಗನ ಬಾಯಿಗೆ ಬಲಿಯಾಗಿ ನೆಲಕ್ಕೊರಗುವ ಬಾಳೆಗೊನೆಯನ್ನು ತಂದು ಕಾಯನ್ನು ತುರಿದು, ಮೊನ್ನೆ ಮೊನ್ನೆಯಷ್ಟೆ ಮಾಡಿಸಿ ತಂದ ಘಮ್ಮನೆಯ ತೆಂಗಿನೆಣ್ಣೆಯಲ್ಲಿ ಕರಿದು ಖಾರಾ ಹಚ್ಚಿ ಇಟ್ಟ ಬಾಳೇಕಾಯಿಯ ಚಿಪ್ಸ್ ನೆನಪಾಯಿತು. ಜೊತೆಗಿರಲೆಂದು ತೊಡೆದೇವು ಮಾಡಲು ಹಿಟ್ಟನ್ನು ಹಿಡಿದು ಬಚ್ಚಲು ಮನೆಯ ಮಾಡಿನಲ್ಲಿರುವ ಒಲೆಯೆಡೆಗೆ ನಡೆದಳು.

ಕಟ್ಟಿಗೆ ಒಟ್ಟಿ, ಬೆಂಕಿ ಹೊತ್ತಿಸಿ, ಒಲೆಯ ಮೇಲೆ ತೊಡೆದೇವಿನ ಗಡಿಗೆಯನ್ನು ಕವುಚಿ ಇರಿಸಿದಳು. ಮಡಕೆ ಕಾಯುತ್ತಿದ್ದಂತೆ ತೆಳ್ಳನೆಯ ಕಬ್ಬಿನ ಹಾಲಿನಿಂದ ರುಬ್ಬಿದ ಹಿಟ್ಟನಲ್ಲಿ ಮುಳುಗಿಸಿಟ್ಟ ಸಣ್ಣ ಕೋಲಿಗೆ ಸುತ್ತಿದ ಕರಚೀಪಿನಾಕಾರದ ಬಟ್ಟೆಯನ್ನೆತ್ತಿ ಗಡಿಗೆಯ ಕುಂಡೆಯ ಮೇಲೆ ಎರೆದಳು. ಕೆಂಪಗೆ ಬೇಯುತ್ತಿದ್ದಂತೆ ಸಾವಕಾಶ ಎಬ್ಬಿಸಿ ಸುಡುಸುಡು ಕೈಯಿಂದ ತೆಗೆದು ತ್ರಿಕೋನಾಕಾರದಲ್ಲಿ ಮಡಚಿ ಮೊರದಲ್ಲಿಟ್ಟಳು. ಅದು ಗರಿಗರಿಯಾಗುತ್ತಿದ್ದಂತೆ ಹುಡಿಯಾಗದಂತೆ ಜಾಗರೂಕತೆ ವಹಿಸಿ ಗಾಳಿ ತಾಗದಂತೆ ಡಬ್ಬದಲ್ಲಿ ಜೋಡಿಸಿದಳು. ಒಳಕ್ಕೆ ಬಂದು ಡಬ್ಬವನ್ನು ನಾಗಂದಿಗೆಯ ಮೇಲೆ ಇಡುತ್ತಿದ್ದಂತೆ ಜಗಲಿಯ ಮಾತುಗಳು ಕಿವಿಯ ಮೇಲೆ ಬಿದ್ದವು.

'ಬಾ ಭಾವಾ, ಕೂತ್ಕಳಿ. ಅಂತೂ ನಿಮ್ಗೆ ಕಷ್ಟ ಕೊಡೋದೇ ಆಗೋತು. ಆಸ್ರಿಗೆ?'

'ಹಾಂಗೆಂತಿಲ್ಲೆ, ಅಂತೂ ಈ ನೆಪ್ದಲ್ಲಿ ನಮ್ಮನ್ನೆಲ್ಲಾ ಕರಸ್ಕ್ಯಂತ್ರಿ ಅಂದಂಗಾತು'

'ಎಲ್ಲ ನಮ್ಮ ಹಣೆಬರಾರಾ, ಕಾಲ್ಗೆ ನೀರ್ ಹಾಕ್ಯಂಡ ಬನ್ನಿ' ಎನ್ನುತ್ತಾ ಟುವಾಲು ನೀಡಿದ ಮಾವನ ಮಾತು ಕೇಳಿಸಿತು. ಯಾರ ಹಣೆಬರಹ? ಹಳಿಯುತ್ತಿರುವುದು ತನ್ನದೇ ಹಣೆಬರಹವೆಂದು ತಿಳಿದು 'ನನ್ನ ಹಣೆಬರಹವನ್ನು ಬರೆವವನು ಇವರದೇ ಮಗನಲ್ಲವೆ?' ಎಂದುಕೊಳ್ಳುತ್ತ ಊಟಕ್ಕೆ ಅನ್ನ ಬಿಸಿಯಿದ್ದರೇ ಚಂದವೆಂದು ಕುಕ್ಕರ್ ಇಟ್ಟಳು.

'ಆರಾಮಿದ್ಯನೆ ಕಲಾವತಿ?' ಎಂದು ತೇಲಿ ಬಂದ ದನಿಗೆ ತಲೆ ಎತ್ತಿದಳು.

'ಹ್ಞಾ, ಆನಾರಾಮಿದ್ದಿ. ನೀವ್ ಆರಾಮಿದ್ರಾ? ಅತ್ತೆ...' ಎಂದು ಹೇಳುವುದರಲ್ಲೆ ಅಡುಗೆ ಮನೆ ದಾಟಿದ ಅವರ ಮಾತು ಔಪಚಾರಿಕವೆಂದು ಮುಖಕ್ಕೆ ಮುಖ ಕೊಟ್ಟು ಮಾತನಾಡದ ಅವರ ರೀತಿಯೇ ತಿಳಿಸಿತು. ಮಹಾ ಅವಮಾನವಾದಂತಾಗಿ ಹೊಟ್ಟೆಯಲ್ಲಿ ಸಂಕಟವಾಯಿತು ಕಲಾವತಿಗೆ.

ಅಡುಗೆ ವೋರಿಯಲ್ಲೇ ಸಾಲಾಗಿ ಬಾಳೆ ಎಲೆಯನ್ನಿಟ್ಟು ಕುಡಿಯಲು ನೀರನ್ನಿಟ್ಟಳು. ಉಪ್ಪು, ಅಪ್ಪೆಮಿಡಿ ಉಪ್ಪಿನಕಾಯಿ, ಮಜ್ಜಿಗೆಮೆಣಸನ್ನು ಬಡಿಸಿದ ನಂತರ ಅತ್ತೆ ಎಲ್ಲರನ್ನೂ ಊಟಕ್ಕೆ ಕರೆದರು. ಹಬೆಯಾಡುವ ಅನ್ನದ ಮೇಲೆ ತುಪ್ಪ ಬಡಿಸುತ್ತ ಅತ್ತೆ ಸಾಗಿದಂತೆ ಉಳಿದ ಪದಾರ್ಥಗಳನ್ನು ಕಲಾವತಿ ಬಡಿಸಿದಳು.

'ಅನಾನಸ್ಸಿನ ಪರಿಮಳ ಘಮಾಯಸ್ತಾ. ತುಪ್ಪಾನೂ ಸರೀ ಬಿಜ್ಜು. ಶಿರಾ ಭಾಳ ಚಲೋ ಆಯ್ದೊ'

'...'

'ಕಲಾವತಿ ಅಡ್ಗೆ ಮಾತ್ರ ಚಲೋ ಮಾಡ್ತು.'

'ಅದಕ್ಕೇನೂ ಕಮ್ಮಿ ಇಲ್ಲೆ' ಎಂದು ತಾನೂ ಇದ್ದೇನೆಂದು ತನ್ನ ಅಸ್ತಿತ್ವವನ್ನು ಸಾಬೀತು ಪಡಿಸಿದ ಹಿರೇಮಾಣಿ ಸುಬ್ರಾಯ.

'ಅಲ್ದೊ ಸುಬ್ಬಣ್ಣೆ, ಮತ್ತೆಂತ ಬೇಕ? ದಾಸರೆ ಹೇಳಿದ್ರಿಲ್ಯಾ ಎಲ್ಲಾರು ಮಾಡುವುದು ಹೊಟ್ಟೆಗಾಗಿ ಅಂತ ಹೇಳಿದ್ರಿಲ್ಯಾ? ಮೊದ್ಲು ಹೊಟ್ಟೆ ಸಂಪಾಗಿರವು ಎಲ್ಲದಕ್ಕು' ಎಲ್ಲರೂ ಒಬ್ಬರೊಬ್ಬರನ್ನು ನೋಡಿಕೊಂಡು ಜೋರಾಗಿ ನಕ್ಕರು. ಆದರೆ, ಯಾರ ಮುಖದಲ್ಲೂ ನಗುವಿರಲಿಲ್ಲ. ಯಾಕೆಂದರೆ ಸುಬ್ರಾಯ ಧಡಕ್ಕನೆ ಎದ್ದು ನಡೆದಿದ್ದ. ಆದರೆ, ಬಾಳೆ-ಕೈಯಿ ಎರಡನ್ನೂ ನೆಕ್ಕುತ್ತ ಅಪ್ಪೆ ಹುಳಿ ಕುಡಿದು ತೇಗಿದ್ದು ನೋಡಿದಾಗ ಅಡುಗೆಯಲ್ಲಿ ನಾನು ಪಾಸು ಎನ್ನುವುದನ್ನು ನಿಸ್ಸಂದೇಹವಾಗಿ ತಿಳಿಸುತ್ತಿತ್ತು. ಆದರೆ, ಮುಂದಿನ ಪರೀಕ್ಷೆ ಹೇಗೋ ಎನ್ನುವ ಒಳಗುದಿ ಸುಡುತ್ತಿತ್ತು ಅವಳನ್ನು.

ಎದುರಿಗಿಟ್ಟ ಕವಳದ ಬಟ್ಟಲಿಂದ ಬಾಯ್ತುಂಬ ಎಲೆ ಅಡಿಕೆ ಹಾಕಿಕೊಂಡು ತಮ್ಮ ಕೆಂಪಾದ ತುಟಿ ಬಿರಿದು ದೇಶಾಚಾರ ಮಾತಾಡುತ್ತ ವಿಷಯಕ್ಕೆ ಬಂದರು. ಊಟಾನಂತರದ ಚಾಕರಿ ಮುಗಿಸುವ ಧಾವಂತದಲ್ಲಿ ಹೊರಗಿನ ಮಾತುಕತೆ ಕೇಳಲೇ ಇಲ್ಲ. ಚಹಾಕ್ಕೆ ನೀರಿಡುವ ಸಂದರ್ಭದಲ್ಲಿ, 'ನೀ ಹೀಂಗೆ ಬಾಯಿ ಮುಚ್ಕ್ಯಂಡು